ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 14 ॥Udp/1263/2015-17 ॥ R.NO.50495/91 ॥ ತಾರೀಕು : 18–04–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

# ಮರೆಯಾದ ಸಾಧಕ ಕೆ. ಸಿ. ಕುಂದರ್

**ಮಹಾನಗರಗಳಲ್ಲಿ ಅನುಭವ ಪಡೆದು ಹುಟ್ಟೂರಿಗೆ ಮರಳಿದ ವಿದ್ಯಾವಂತ, ಜ್ಞಾನಿ ಕೆ.ಸಿ.ಕುಂದರ್ ಕರಾವಳಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸಾಧನೆ ಸ್ಮರಣೀಯವಾದುದು. ಸಮಾಜದಲ್ಲಿ ಸಂಪರ್ಕ, ಸಂವಹನ ವ್ಯವಸ್ಥೆ ಸರಿಯಾಗಿಲ್ಲದ ಕಾಲದಲ್ಲೂ ಕೆ.ಸಿ.ಕುಂದರ್ ಅಭಿವೃದ್ಧಿಯ ರಥ ಎಳೆಯಲು ಶ್ರಮಿಸಿದವರು.**

ಆಕರ್ಷಕ ವ್ಯಕ್ತಿತ್ವ, ಮೃದುವಾದ ಆದರೆ ಸ್ಪಷ್ಟವಾದ ಮಾತು, ದೂರದರ್ಶಿತ್ವ, ಅಭಿವೃದ್ಧಿಯ ಚಿಂತನೆ, ಸೇವಾ ಮನೋಭಾವದ ಮೂಲಕ ಕರಾವಳಿಯಲ್ಲಿ ಜನಪ್ರಿಯ ನಾಯಕರಾಗಿ ಗುರುತಿಸಲ್ಪಟ್ಟ ಉದ್ಯಮಿ ಹಾಗೂ ಮುತ್ಸದ್ಧಿ ಕೆ.ಸಿ.ಕುಂದರ್.

ಮೀನಿನ ವ್ಯವಹಾರ ಎನ್ನುವುದು ಮೀನುಗಾರಿಕೆ ಎನ್ನುವಷ್ಟೆ ಸೀಮಿತವಾದ ವ್ಯಾಪ್ತಿ ಹೊಂದಿದ ಕಾಲದಲ್ಲಿ ಆ ವೃತ್ತಿಗೊಂದು ಉದ್ಯಮದ ರೂಪ ನೀಡಿ ವ್ಯವಹಾರದಲ್ಲಿ ವೈವಿಧ್ಯತೆ, ವಿಸ್ತಾರ, ಆಧುನಿಕತೆ, ಶಿಸ್ತು ತರುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ ಪ್ರಮುಖರಲ್ಲಿ ಇವರು ಮುಂಚೂಣಿಯುವರಾಗಿದ್ದರು. ಯಾಂತ್ರಿಕ ಮೀನುಗಾರಿಕೆ ಬಗ್ಗೆ ಕರಾವಳಿ ಮೀನುಗಾರರಲ್ಲಿ ಪರಿಜ್ಞಾನ ಕಡಿಮೆ ಇರುವ ಕಾಲದಲ್ಲಿ ಕರಾವಳಿಯಲ್ಲಿ ಅದನ್ನು ಅನುಷ್ಠಾನಗೊಳಿಸಿ, ಹೆಚ್ಚು ಹೆಚ್ಚು ಜನರು ಈ ಉದ್ಯಮದತ್ತ ಆಕರ್ಷಿತರಾಗುವಂತೆ ಮಾಡಿದ ಖ್ಯಾತಿ ಈ "ಕುಂದರ್" ಕುಟುಂಬದ್ದು.

ವಿದ್ಯಾವಂತರೂ ಸೇರಿ ಸಾವಿರಾರು ಮಂದಿ ಯುವಕರು ಉದ್ಯೋಗ ಪಡೆದರು. ಮೀನುಗಾರಿಕೆ ತಮ್ಮ ವ್ಯವಹಾರವಲ್ಲ ಎಂದು ತಿಳಿದವರೂ ಈ ವ್ಯವಹಾರಕ್ಕೆ ಬರುವಂತೆ ಮತ್ಸ್ಯೋದ್ಯಮಕ್ಕೆ "ಗೌರವ" ತಂದು ಕೊಟ್ಟವರು ಕೆ.ಸಿ.ಕುಂದರ್. ಅವರು ಸಹೋದರರೊಂದಿಗೆ ನಡೆಸುತ್ತಿದ್ದ ಉದ್ಯಮ "ಜನತಾ ಫಿಶರೀಸ್" ಹಾಗೂ ಸಹ ಉದ್ಯಮಗಳು ಇತರ ಮತ್ಸ್ಯೋದ್ಯಮಿಗಳಿಗೆ ಮಾದರಿಯಾದವು.

ಕೆ.ಸಿ.ಕುಂದರ್ ಓರ್ವ ವಿದ್ಯಾವಂತ ಜ್ಞಾನ ಹೊಂದಿದ ಆರ್ಥಿಕ ತಜ್ಞರೂ, ಧಾರ್ಮಿಕ, ಸಾಮಾಜಿಕ ಸಹಕಾರ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ ಸಮಾಜ ಸೇವಕರೂ ಆದುದರಿಂದ ಅವರ ಸೇವಾ ಕ್ಷೇತ್ರ ಬಹಳ ವಿಸ್ತಾರಗೊಂಡಿತ್ತು.

**ಪ್ರಥಮ ಜಿಲ್ಲಾ ಪರಿಷತ್ ಅಧ್ಯಕ್ಷ:**

ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಜಿಲ್ಲಾ ಪರಿಷತ್ ಕಲ್ಪನೆ ಸಾಕಾರಗೊಂಡಾಗ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಸದಸ್ಯರಾಗಿ ಆಯ್ಕೆಯಾಗವುದೇ ಶಾಸಕರಾಗಿ ಆಯ್ಕೆಯಾದಂತೆ. ಅದರಲ್ಲೂ ಪ್ರಪ್ರಥಮವಾಗಿ ಅಧ್ಯಕ್ಷರಾಗಿ ಆಯ್ಕೆಯಾಗುವವರು ಯಾರು



ಎಂಬ ಕುತೂಹಲ, ಕುಂದಾಪುರ ಕಡೆಯವರೇ ಆಗಬೇಕೆಂಬ ಆಶಯ ಎಲ್ಲರದ್ದು. ಆ ಕಾಲದಲ್ಲಿ ಈಗಿನ ಉಡುಪಿ ಜಿಲ್ಲೆಯ ಮುಖ್ಯವಾಗಿ ಕೋಟ ಕುಂದಾಪುರ ಭಾಗದ ರಾಜಕೀಯ ಧುರೀಣರೇ ಪ್ರಭಾವಶಾಲಿಯಾಗಿದ್ದರು. ಅದರಲ್ಲೂ ಎ.ಜಿ.ಕೊಡ್ಗಿ, ಕೆ.ಸಿ.ಕುಂದರ್ ಇಬ್ಬರಲ್ಲಿ ಯಾರಾದರೊಬ್ಬರು ಆಗಬಹುದೆಂಬ ನಿರೀಕ್ಷೆ. ಅದೃಷ್ಟ ಕೆ.ಸಿ.ಕುಂದರ್‌ರಿಗೆ ಒಲಿಯಿತು. ದ.ಕ. ಜಿಲ್ಲಾ ಪರಿಷತ್ ಪ್ರಥಮ ಅಧ್ಯಕ್ಷರಾದರು. ಎಲ್ಲ ಸದಸ್ಯರ ನಾಯಕರ ಸಹಕಾರ ಪಡೆದು ಸಮರ್ಥವಾಗಿಯೇ ಆಡಳಿತ ನಡೆಸಿ ಕರ್ನಾಟಕ ಸರಕಾರದಿಂದ ಪ್ರಶಂಸೆ ಪಡೆದರು.

**ಮುಂಗಾರು ನಿರ್ದೇಶಕ :**

ಕರಾವಳಿಯಲ್ಲಿ ಪತ್ರಿಕೋದ್ಯಮಕ್ಕೊಂದು ಹೊಸದಿಕ್ಕು ತೋರಿಸಿದ ಪತ್ರಿಕೆ "ಮುಂಗಾರು" . ವಡ್ಡರ್ಸೆ ರಘುರಾಮ ಶೆಟ್ಟಿಯವರ ನೇತೃತ್ವದ ಈ ಪತ್ರಿಕೆ ಮುಖ್ಯವಾಗಿ ಹಿಂದುಳಿದ ವರ್ಗದ ಏಳಿಗೆ ಗಮನದಲ್ಲಿಟ್ಟುಕೊಂಡು ಪ್ರಕಟವಾಗುತ್ತಿತ್ತು. ಮೀನುಗಾರರು, ಮತ್ಸ್ಯೋದ್ಯಮಿಗಳು ಈ ಪತ್ರಿಕೆಯನ್ನು ಬಹಳ ಬೆಂಬಲಿಸಿದ್ದರು. ಈ ಪತ್ರಿಕೆಯ ನಿರ್ದೇಶಕರಾಗಿ ಪ್ರೋತ್ಸಾಹ ನೀಡಿದವರು ಕೆ.ಸಿ.ಕುಂದರ್ ಅವರು.

**ಸಂಘಟನಾ ಶಕ್ತಿ :**

ಕೆ.ಸಿಕುಂದರ್ ಪ್ರಚಾರ ಪ್ರಿಯರಲ್ಲ. ಹುದ್ದೆಯನ್ನು ಹುಡುಕಿಕೊಂಡು ಹೋದವರೂ ಅಲ್ಲ. ಆದರೆ ಅವರ ಜ್ಞಾನ, ಅವರ ನಾಯಕತ್ವಕ್ಕಿರುವ ಗೌರವ, ಕರ್ತವ್ಯ ಪ್ರಜ್ಞೆ ಸಮರ್ಥವಾಗಿ ನಿರ್ವಹಿಸುವ ಆತ್ಮ ವಿಶ್ವಾಸ ಅವರು ಹಲವು ಕ್ಷೇತ್ರಗಳಲ್ಲಿ ಬಹಳಷ್ಟು ಜವಾಬ್ದಾರಿ ಸ್ಥಾನ ಪಡೆಯುವಂತೆ ಮಾಡಿತು.

ಅವರ ಕೇಂದ್ರ ಸ್ಥಳ ಕೋಟದಲ್ಲಿ, ಗ್ರಾಮ ವಿಕಾಸ ಕೇಂದ್ರ ಕೋಟ, ಕೋಟ ಸಿ.ಎ ಬ್ಯಾಂಕ್, ಅಮೃತೇಶ್ವರಿ ದೇವಸ್ಥಾನ ಕೋಟ, ಮಣೂರು ಮೀನುಗಾರರ ಕ್ರಿಯಾ ಸಮಿತಿ, ಹೀಗೆ ಸಹಕಾರ, ಧಾರ್ಮಿಕ, ಸೇವಾಕ್ಷೇತ್ರಗಳ ಮುಖ್ಯಸ್ಥರಾಗಿದ್ದರು. ಅವರ ಸೇವೆಯ ವಿಸ್ತಾರ ಜಿಲ್ಲೆ, ರಾಜ್ಯಮಟ್ಟಕ್ಕೂ ಬೆಳೆಯಿತು.

ಮತ್ಸ್ಯೋದ್ಯಮದಲ್ಲಿ, ಉಡುಪಿ– ಕುಂದಾಪುರ ತಾಲ್ಲೂಕು ಮೀನುಗಾರರ ಕ್ರಿಯಾ ಸಮಿತಿ, ಕರ್ನಾಟಕ ಕರಾವಳಿ ಐಸ್‌ಪ್ಲಾಂಟ್ ಮತ್ತು ಕೋಲ್ಡ್ ಸ್ಟೋರೇಜ್ ಮಾಲಕರ ಸಂಘ, ಅಖಿಲ ಕರ್ನಾಟಕ ಮೀನುಗಾರರ ಪರಿಷತ್, ಕೇಂದ್ರ ಹಾಗೂ ದ.ಕ. ಜಿಲ್ಲಾ ಮೀನು ಮಾರಾಟ ಫೆಡರೇಶನ್ , ರಾಜ್ಯ ಮೀನುಗಾರಿಕಾ ಸಲಹಾ ಸಮಿತಿ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ಸಹಕಾರಿ ಸಂಘ ಮುಂತಾದವುಗಳಲ್ಲಿ ಪ್ರಮುಖ ಹುದ್ದೆಗಳಲ್ಲಿ ಅವರು ಕರ್ತವ್ಯ ನಿರ್ವಹಿಸಿದ್ದರು.

ಮಂಗಳೂರು ವಿಶ್ವ ವಿದ್ಯಾಲಯದ ಸೆನೆಟ್, ಅಕಾಡೆಮಿ ಕೌನ್ಸಿಲ್ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದವರು.

**ಬ್ಯಾಂಕಿಂಗ್ ಕ್ಷೇತ್ರ :**

ಕೋಟ ಸಿ.ಎ. ಬ್ಯಾಂಕ್ ಅಧ್ಯಕ್ಷರಾಗಿ ಪ್ರಗತಿ ಸಾಧಿಸಿದ ಕುಂದರ್ ಅವರು ಮಹಾಲಕ್ಷ್ಮೀ ಕೋ–ಓಪರೇಟಿವ್ ಬ್ಯಾಂಕ್ ಸ್ಥಾಪನೆ ಹಾಗೂ ಅದರ ಅಭಿವೃದ್ಧಿಯಲ್ಲಿ ಬಹಳ ಶ್ರಮ ವಹಿಸಿದವರು. 17 ವರ್ಷ ಮಹಾಲಕ್ಷ್ಮೀ ಕೋ–ಓಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರಾಗಿ ಶ್ರಮಿಸಿದವರು. ಅರ್ಬನ್ ಬ್ಯಾಂಕ್ ಮಂಗಳೂರು ಸೇರಿದಂತೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹಲವರಿಗೆ ಮಾರ್ಗದರ್ಶನ ಮಾಡಿದ ಖ್ಯಾತಿ ಇವರದ್ದಾಗಿತ್ತು.

(6ನೇ ಪುಟಕ್ಕೆ)

## ಭಾವಪೂರ್ಣ ಶ್ರದ್ಧಾಂಜಲಿ



ಕೆ.ಸಿ.ಕುಂದರ್
ಕೋಟ

ನಮ್ಮ ಸಂಘದ ಮುಂಬಯಿಯ ಮುಖ್ಯ ಕಚೇರಿಯಲ್ಲಿ ಅವಿರತವಾಗಿ ಸಂಘದ ಏಳಿಗೆಗಾಗಿ ದುಡಿದು ತದನಂತರ ಊರಿನಲ್ಲಿಯೂ ಸಹ ಮಹಿಷಾಸುರಮರ್ದಿನಿ ದೇವಸ್ಥಾನದ ಪ್ರತಿಯೊಂದು ಕಾರ್ಯಕಲಾಪದಲ್ಲಿ ಭಾಗಿಯಾಗಿ ನಮಗೆಲ್ಲರಿಗೂ ಎಲ್ಲಾ ರೀತಿಯ ಮಾರ್ಗದರ್ಶನ, ಸ್ಪೂರ್ತಿ ಹಾಗೂ ಸಹಕಾರ ನೀಡಿದ ಹಿರಿಯ ಉದ್ಯಮಿ. ಸಮಾಜದಲ್ಲಿ ಹತ್ತು ಹಲವು ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಈ ದಿವ್ಯ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ಕರುಣಿಸಲಿ ಎಂದು ಹಾರೈಸುತ್ತಾ ಇವರಿಗೆ ಗೌರವಪೂರ್ಣ ನಮನ ಸಲ್ಲಿಸುವ

ಅಧ್ಯಕ್ಷರು ಹಾಗೂ ಸರ್ವಸದಸ್ಯರು
**ಮೊಗವೀರ ಮಹಾಜನ ಸೇವಾ ಸಂಘ**
(ಬಗ್ವಾಡಿ ಹೋಬಳಿ–1941)
ಮುಂಬಯಿ–ಕುಂದಾಪುರ